


### ಹಿತ್ತಲ ಗಿಡ ಮದ್ದಲ್ಲ

'ಹಿತ್ತಲ ಗಿಡ ಮದ್ದಲ್ಲ' ಎಂಬಂತೆ ರಜನೀಕಾಂತ್ ಕನ್ನಡದ ಪ್ರತಿಭೆಯಾದರೂ ಪರಭಾಷಾ ಚಲನ ಚಿತ್ರರಂಗದಲ್ಲಿ ಅವಕಾಶ ಪಡೆದು ಇಂದಿಗೂ ತಮ್ಮ ಅಪಾರ ಅಭಿಮಾನಿಗಳನ್ನು ರಂಜಿಸುತ್ತಿರುವ ವಿಷಯವನ್ನು ಸುಧಾ ಮುಖಪುಟದ ಬರಹಗಳು (ವಿಶಾಖ, ರಘುನಾಥ, ಹನೀಫ್) ಎತ್ತಿಹೇಳಿವೆ.

-ವಿಭಾ ಮುರಳೀಧರ್, ತುಮಕೂರು, ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ, ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ, ನೆ.ಲ.ರಾಂ, ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು, ಎಚ್.ಎನ್.ವಿಶ್ವನಾಥ, ಶಿವಮೊಗ್ಗ/ ಎಚ್.ಆನಂದಕುಮಾರ್, ಚಿತ್ರದುರ್ಗ

### ರಜನೀಕಾಂತ್ ಕನ್ನಡ ದ್ರೋಹಿ!

ರಜನಿಯ ಕುರಿತ 'ಸುಧಾ' ಮುಖಪುಟ ಲೇಖನ, ಚಿತ್ರಗಳನ್ನು ನೋಡಿ ಬೇಜಾರು ಆಯಿತು. ರಜನಿ ಎಂದೂ ಕನ್ನಡಿಗರನ್ನು ಗೌರವಿಸಿಲ್ಲ. ನಮ್ಮ ನೆಚ್ಚಿನ ಡಾ.ರಾಜ್‌ಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಬಂದಾಗ ದೂರದರ್ಶನ ರಜನಿ ಅಭಿಪ್ರಾಯ ಕೇಳಿತ್ತು. ಆಗ ರಜನಿ ರಾಜಣ್ಣರನ್ನು ಗೌರವಿಸುವ ಯಾವ ನುಡಿಯನ್ನೂ ಹೇಳಲಿಲ್ಲ. ಹೊಗೇನಕಲ್ ವಿವಾದದಲ್ಲಿ ತಮಿಳರ ಪರ ತಮಿಳುನಾಡಿನಲ್ಲಿ ಉಪವಾಸ ಕುಳಿತು, ಕನ್ನಡಿಗರ ಬಗ್ಗೆ ಕೇವಲವಾಗಿ ಮಾತಾಡಿದ್ದಾರೆ.

-ದೇವರಾಜು ಎ.ಜಿ.ಗೌಡ, ಬೆಂಗಳೂರು

### 'ಬಾಷಾ' ಅಲ್ಲ, 'ಬಾಬಾ'

ಹಂಚಿಕೆದಾರರಿಗೆ ರಜನಿ ಹಣ ವಾಪಸ್ ಮಾಡಿದ ಚಿತ್ರ 'ಬಾಬಾ', ಅದು 'ಬಾಷಾ' ಅಲ್ಲ. ಕನ್ನಡದಲ್ಲಿ ಇದು 'ಕೋಟಿಗೊಬ್ಬ' ಚಿತ್ರವಾಗಿ ಸಫಲವಾಗಿದೆ. ತಮಿಳು ಚಿತ್ರವೊಂದರ ಹೆಸರು 'ನಿನ್ನೈಪಾಲೇ ಇನಿಕು' ಅಲ್ಲ, 'ನಿನ್ನೈತಾಲೇ ಇನಿಕ್ಕು' ಸರಿ.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಮೊಳಕಾಲ್ಮುರು ಸುರೇಶ, ಬಳ್ಳಾರಿ

### ಸಕಾಲಿಕ ಲೇಖನ

'ಶಿಕ್ಷಣವೋ, ಶಿಕ್ಷೆಯೋ?' ನಾ.ದಿವಾಕರ ಲೇಖನ ಸಕಾಲಿಕವಾಗಿದೆ.

-ಸು. ವಿಜಯಲಕ್ಷ್ಮಿ, ಶಿವಮೊಗ್ಗ/ ತರಂಗಿಣಿ, ತುಮಕೂರು/ ಎಂ.ಆರ್.ಶೋಭಾಶೇಖರ, ದೊಡ್ಡಬಳ್ಳಾಪುರ

### ನಮ್ಮವನೇ ಕಥಾನಾಯಕ

'ಲೋಕದಾ ಡೊಂಕ' ಕಥೆಯ ಶಂಕರಪ್ಪನಂತಹವರು ಎಲ್ಲೆಲ್ಲೂ ಇದ್ದಾರೆ. ನಮ್ಮ ನಡುವಿನ ವ್ಯಕ್ತಿಯೊಬ್ಬನನ್ನು ಡಿ.ಆರ್.ಚಂದ್ರ ಮಾಗಡಿ ಕಥಾ ನಾಯಕರಾಗಿಸಿದ್ದಾರೆ. ಕಥೆ ಚೆನ್ನಾಗಿದೆ.

-ರಾಜೇಂದ್ರ ಕುಮಾರ್, ದೊಡ್ಡಬಳ್ಳಾಪುರ

### ಸೂಯೆಜ್ ಕಾಲುವೆ ಮಾಹಿತಿ

'ಸೂಯೆಜ್ ಕಾಲುವೆ' ಬಗ್ಗೆ ಪ್ರದೀಪ್ ಕುಮಾರ್ ಲೇಖನ ಹೆಚ್ಚು ಮಾಹಿತಿ ನೀಡಿದೆ.

-ರೂಪ ವೇಣುಗೋಪಾಲ, ದಾಂಡೇಲಿ, ಪುಷ್ಪಾ ಶ್ರೀರಾಮರಾಜು, ಬೆಂಗಳೂರು

### ಬುದ್ಧನ ಬಗ್ಗೆ ತಪ್ಪು ವಿವರ

ಡಾ.ಜಯಕರ ಭಂಡಾರಿಯವರ 'ಅ'ಶೋಕ' ವನದಲ್ಲಿ ಶೋಕ!' ಲೇಖನದಲ್ಲಿ ಬುದ್ಧನ ಜನನವಾಗಿದ್ದು ಅಶೋಕ ವೃಕ್ಷದ ಕೆಳಗೆ ಎಂದಿದೆ. ಜನಿಸಿದಾಗ ಅವನು ಸಿದ್ಧಾರ್ಥನಾಗಿದ್ದ, ಬುದ್ಧನಾಗಿರಲಿಲ್ಲ. ಅವನ ಜನನ ನೇಪಾಳದ ಲುಂಬಿಣಿಯ ರಾಜವಂಶದಲ್ಲಿ. ಅವನಿಗೆ ಜ್ಞಾನೋದಯವಾಗಿ ಬುದ್ಧನಾಗಿದ್ದು ಬಿಹಾರದ ಬೌದ್ಧಗಯಾದಲ್ಲಿ, ಬೋಧಿ ವೃಕ್ಷದ ಕೆಳಗೆ.

-ಎಂ.ಕೆ. ರಾಜಗೋಪಾಲ್, ಬೆಂಗಳೂರು

### ಅಜೀರ್ಣದಿಂದ ಕೊಬ್ಬು

ಗೀತಾ ಶ್ರೀನಿವಾಸನ್ 'ಜಂಕ್‌ಫುಡ್ ಮತ್ತು ಆಯುರ್ವೇದ' ಲೇಖನದಲ್ಲಿ ಬರೆದಿರುವಂತೆ ಒಮ್ಮೆ ಸೇವಿಸಿದ ಆಹಾರವು ಜೀರ್ಣವಾಗುವುದರೊಳಗೆ ಮತ್ತೆ ಸೇವಿಸಿದರೆ, ಅದು ದೇಹದಲ್ಲಿ ಕೊಬ್ಬಾಗಿ ಶೇಖರಗೊಳ್ಳುತ್ತದೆ. ಇದು ಸತ್ಯ.

-ಪಿ.ಎನ್. ಶ್ರೀವತ್ಸ, ಬೆಂಗಳೂರು/ ರಾಜಶೇಖರಗೌಡ, ಕೊಟ್ಟೂರು, ಬಿ.ಎಸ್.ಮುಳ್ಳೂರ, ಹಲಗತ್ತಿ





Teflon Platinum HIGH PERFORMANCE

ಸ್ವಾಭಾವಿಕವಾಗಿಯೇ! ನೀವು ನಿರಾಲಿ ನಾನ್-ಸ್ಟಿಕ್ ಕುಕ್‌ವೇರ್ ಉಪಯೋಗಿಸಿ ಅಡುಗೆ ಮಾಡುವಾಗ, ಕನಿಷ್ಠ ಎಣ್ಣೆ ಬೇಕಾಗುವುದರಿಂದ ನಿಮ್ಮ ಆಹಾರ ತನ್ನ ನೈಸರ್ಗಿಕ ಸ್ವಾದವನ್ನು ಉಳಿಸಿಕೊಳ್ಳುತ್ತದೆ. ನಿರಾಲಿಯು ತನ್ನ ಉತ್ಪನ್ನ ತಯಾರಿಕೆಯಲ್ಲಿ ಡ್ಯುಪಾಂಟ್‌ನ ವಿಶ್ವಖ್ಯಾತಿಯ ಆಹಾರದರ್ಜೆಯ ಟೆಫ್ಲಾನ್ ಕೋಟಿಂಗನ್ನು ಬಳಸುತ್ತದೆ. ಇದರಿಂದಾಗಿ ಅಡುಗೆಪಾತ್ರೆ ಬಿಸಿಯಾದ ನಂತರ ಆಹಾರ ಅದರ ತಳಕ್ಕೆ ಅಂಟಿಕೊಳ್ಳುವುದು ತಡೆಯುತ್ತದೆ. ಈ ರೀತಿಯಲ್ಲಿ ನಿರಾಲಿ ನಾನ್-ಸ್ಟಿಕ್ ಕುಕ್‌ವೇರ್ ನೈಸರ್ಗಿಕ ರುಚಿಯ ಆಹಾರದ ಖಾತರಿ ನೀಡುತ್ತಲೇ ನೀವು ಸೇವಿಸುವ ಆಹಾರದ ಕ್ಯಾಲೋರಿ ಅಂಶವನ್ನು ಕಡಿತಗೊಳ್ಳಿಸುತ್ತದೆ. ನಿಮ್ಮ ವೈವಿಧ್ಯಮಯವಾದ ಅಡುಗೆಗಳ ತಯಾರಿಕೆಗೆ ಅನುಗುಣವಾಗಿ ನಿರಾಲಿಯ ಬಳಿ ಅಡುಗೆಪಾತ್ರೆಗಳ (ಕುಕ್‌ವೇರ್) ವಿಶಾಲ ಶ್ರೇಣಿಯೇ ಇದೆ.

Nirali®
NON - STICK COOKWARE
Go ahead, eat right, eat light.

Mfg. By : **L. N. Engineering Works Pvt. Ltd.** Ph. : 022-2431 5500 Fax : 022-2436 2543 E-mail : niralicookware@vsnl.com Website : www.niralicookwares.com
**DISTRIBUTORS : Banglore :** 080- 22292439, **Hubli :** 09945135444/09945539460, **Udipi :** 0836 -2523842. **For Corporate Enq. Contact :** 9379487210.